## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು** | : | **ಶ್ರೀ ಮುನಿರಾಜುಗೌಡ ಪಿ.ಎಂ.** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **553** |
| **ಉತ್ತರಿಸಬೇಕಾದ ದಿನಾಂಕ** | : | **11.07.2023** |
| **ಉತ್ತರಿಸಬೇಕಾದ ಸಚಿವರು** | : | **ಸಹಕಾರ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ನಿ). ಕೋಲಾರ ಇದರ ವಿವಿಧ ಶಾಖೆಗಳ ಮತ್ತು ಸಹಕಾರ ಸಂಘಗಳ ಮೂಲಕ ಸ್ವ-ಸಹಾಯ ಸಂಘಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ನೀಡುವ ಬಡ್ಡಿ ಬಿಲ್ಲು ಕ್ಲೇಂ ಮಾಡುವಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ 2017-18 ರಿಂದ 2021-22 ನೇ ಸಾಲಿನವರೆಗೆ ಬ್ಯಾಂಕಿನ ಮರು ಲೆಕ್ಕ ಪರಿಶೋಧನೆಗೆ ಸಹಕಾರ ಇಲಾಖೆಯಿಂದ ಆದೇಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ. |
| ಆ) | ಬಂದಿದ್ದಲ್ಲಿ, ಮರು ಲೆಕ್ಕಪರಿಶೋಧನೆ ನಡೆಸಿ ವರದಿ ಸಲ್ಲಿಸಲಾಗಿದೆಯೇ; ಸಲ್ಲಿಸಲಾಗಿದ್ದಲ್ಲಿ, ವರದಿಯ ಪ್ರತಿಯನ್ನು ನೀಡುವುದು; ವರದಿ ಸಲ್ಲಿಸದಿದ್ದಲ್ಲಿ ಕಾರಣಗಳೇನು; | ಮರುಲೆಕ್ಕಪರಿಶೋಧನೆ ಪ್ರಾರಂಭಿಸಲು ದಾಖಲೆಗಳನ್ನು ಹಾಜರುಪಡಿಸುವಂತೆ ಮರುಲೆಕ್ಕಪರಿಶೋಧನಾ ತಂಡದ ಮುಖ್ಯಸ್ಥರಿಂದ ಬ್ಯಾಂಕ್‌ನ ಮುಖ್ಯಕಾರ್ಯನಿರ್ವಾಹಕರಿಗೆ ಪತ್ರ ಬರೆಯಲಾಗಿದ್ದು, ಅವಶ್ಯವಿರುವ ಯಾವುದೇ ದಾಖಲೆಗಳನ್ನು ಬ್ಯಾಂಕಿನವರು ಹಾಜರು ಪಡಿಸದ ಕಾರಣ ಮರುಲೆಕ್ಕಪರಿಶೋಧನೆ ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. |
| ಇ) | ಮರು ಲೆಕ್ಕಪರಿಶೋಧನಾ ವರದಿಯನ್ನು ತಯಾರು ಮಾಡಲು ನೇಮಕ ಮಾಡಿರುವ ಲೆಕ್ಕಪರಿಶೋಧಕರು ಹಾಲಿ ಅಧ್ಯಕ್ಷರ ಜೊತೆ ಶಾಮೀಲಾಗಿ ವರದಿ ಸಲ್ಲಿಸಲು ಅನಗತ್ಯ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು; | ಬಂದಿರುವುದಿಲ್ಲ. |
| ಈ) | ಕೇಂದ್ರ ಸರ್ಕಾರ ನಗದು ಅಮಾನ್ಯೀಕರಣ ಮಾಡಿದ ಸಮಯದಲ್ಲಿ ಎರಡೂ ಜಿಲ್ಲೆಗಳ ವಿವಿಧ ಶಾಖೆಗಳಲ್ಲಿ ಆದ ಹಣದ ಅವ್ಯವಹಾರಗಳ ವಿಷಯದಲ್ಲಿ ಶಾಖೆಯ ವ್ಯವಸ್ಥಾಪಕರಿಗೆ ನೋಟೀಸ್ ನೀಡಲಾಗಿದೆಯೇ? | ಡಿ.ಸಿ.ಸಿ ಬ್ಯಾಂಕುಗಳಿಗೆ ಸಂಬಂಧಿಸಿದಂತೆ ನಗದು ಅಮಾನ್ಯೀಕರಣ ಉಸ್ತುವಾರಿಯನ್ನು ನಬಾರ್ಡ್ ನಿರ್ವಹಿಸಿದ್ದು, ಈ ಸಂಬಂಧ ಬ್ಯಾಂಕಿಗೆ ನಬಾರ್ಡ್‌ನಿಂದ ಯಾವುದೇ ನೋಟಿಸ್ ನೀಡಿರುವುದಿಲ್ಲ. |

| | | |
|---|---|---|
| ಉ) | ಸದರಿ ಬ್ಯಾಂಕಿನಲ್ಲಿ ಆಸ್ತಿತ್ವದಲ್ಲೇ ಇಲ್ಲದ ಎಸ್.ಹೆಚ್.ಜಿ.ಗಳಿಗೆ ಸಾಲ ನೀಡಿರುವುದಾಗಿ ದಾಖಲೆ ಸೃಷ್ಟಿಸಿ ಬಡ್ಡಿ ಸೌಲಭ್ಯ/ ಸಬ್ಸಿಡಿ ದುರುಪಯೋಗ, ಆಸ್ತಿತ್ವದಲ್ಲಿ ಇಲ್ಲದ ರೈತರ ಹೆಸರಿನಲ್ಲಿ ಸಾಲ ಮನ್ನಾ ಯೋಜನೆಯಲ್ಲಿ ಕೋಟ್ಯಂತರ ರೂಪಾಯಿ ಅವ್ಯವಹಾರ ಮತ್ತು ಸಹಕಾರ ಕ್ಷೇತ್ರಕ್ಕೆ ಸಂಬಂಧವಿಲ್ಲದ ವ್ಯಾಪಾರ ಸಂಸ್ಥೆಗಳಿಗೆ ಕೋಟ್ಯಂತರ ರೂಪಾಯಿಗಳು ವರ್ಗಾವಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು: | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಕೋಲಾರ ಈ ಬ್ಯಾಂಕಿನಿಂದ ಆಸ್ತಿತ್ವದಲ್ಲೇ ಇಲ್ಲದ ಎಸ್.ಹೆಚ್.ಜಿ ಗಳಿಗೆ ಸಾಲ ನೀಡಿರುವುದಾಗಿ ದಾಖಲೆ ಸೃಷ್ಟಿಸಿ ಬಡ್ಡಿ ಸೌಲಭ್ಯ / ಸಬ್ಸಿಡಿ ದುರುಪಯೋಗವಾಗಿರುವ ಬಗ್ಗೆ ವರದಿಯಾಗಿರುವುದಿಲ್ಲ.<br><br>ಬ್ಯಾಂಕಿನಿಂದ ಅಸ್ತಿತ್ವದಲ್ಲಿ ಇಲ್ಲದ ರೈತರ ಹೆಸರಿನಲ್ಲಿ ಸಾಲ ಮನ್ನಾ ಯೋಜನೆಯಡಿಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ವರದಿಯಾಗಿರುವುದಿಲ್ಲ.<br><br>ಸಹಕಾರ ಕ್ಷೇತ್ರಕ್ಕೆ ಸಂಬಂಧವಿಲ್ಲದ ಸಂಸ್ಥೆಗಳು ಬ್ಯಾಂಕಿನಲ್ಲಿ ವ್ಯವಹರಿಸಿರುವ ಕುರಿತು ಚಿಂತಾಮಣಿ ಶಾಖೆಯ ವ್ಯವಹಾರಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ1959ರ ಕಲಂ 64ರ ವಿಚಾರಣೆ ನಡೆದಿದ್ದು, ಸದರಿ ವಿಚಾರಣಾ ವರದಿಯಲ್ಲಿ ಆರೋಪ ಸಾಬೀತಾಗಿರುವುದಿಲ್ಲ. |
| ಊ) | ಸೆವೆನ್ ಸ್ಟಾರ್ ಬಳಕೆದಾರರ ಸಹಕಾರ ಸಂಘ ಬಂಗಾರಪೇಟೆ, ಕೋಲಾರ ಸಂಸ್ಥೆ ನೋಂದಣಿಯಾದ ಮೂರು ತಿಂಗಳೊಳಗಾಗಿ ಸಹಕಾರ ಸಂಘದ ಕಾಯ್ದೆಗೆ ವಿರುದ್ಧವಾಗಿ ಕೋಟ್ಯಂತರ ರೂಪಾಯಿ ಸಾಲ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು: | ಸೆವೆನ್ ಸ್ಟಾರ್ ಬಳಕೆದಾರರ ಸಹಕಾರ ಸಂಘ ನಿ,. ಬಂಗಾರಪೇಟೆ, ಈ ಸಂಘವು ದಿ:21.06.2019 ರಂದು ನೋಂದಣಿಯಾಗಿದ್ದು, ಈ ಸಂಘಕ್ಕೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿ.ಸಿ.ಸಿ ಬ್ಯಾಂಕಿನಿಂದ 2019-20ನೇ ಸಾಲಿನಲ್ಲಿ ರೂ.10 ಕೋಟಿ ನಗದು ಪತ್ತಿನ ಸಾಲವನ್ನು ಅಕ್ಕಿ ಮತ್ತು ರಾಗಿ ಫ್ಲೋರ್ ಮಿಲ್ ಉದ್ದಿಮೆ ನಡೆಸಲು ದುಡಿಯುವ ಬಂಡವಾಳವಾಗಿ ಮಂಜೂರು ಮಾಡಲಾಗಿರುತ್ತದೆ. ಈ ಸಾಲವನ್ನು ದಿ:09.12.2021 ರಂದು ಬ್ಯಾಂಕಿಗೆ ಸಂಪೂರ್ಣವಾಗಿ ಮರುಪಾವತಿಸಿದ್ದು ಪ್ರಸ್ತುತ ಈ ಸಂಘದಿಂದ ಬ್ಯಾಂಕಿಗೆ ಯಾವುದೇ ಸಾಲ ಬಾಕಿ ಇರುವುದಿಲ್ಲ. |
| ಋ) | ಮೇಲ್ಕಂಡ ರೀತಿಯಲ್ಲಿ ಹಣ ದುರುಪಯೋಗ ಮಾಡಿರುವವರ ಮೇಲೆ ಕ್ರಮ ಕೈಗೊಳ್ಳಲು ಹಾಗೂ ದುರುಪಯೋಗ ಮಾಡಿಕೊಂಡಿರುವ ಹಣ ವಸೂಲಿ ಮಾಡಲು, ಸಹಕಾರಿ ಸಂಸ್ಥೆಗಳ ಅಸ್ತಿತ್ವವನ್ನು ಉಳಿಸುವ ಸಲುವಾಗಿ ಲೋಕಾಯುಕ್ತ ಅಥವಾ ಸಿ.ಬಿ.ಐ. ನಂತರ ತನಿಖಾ ಸಂಸ್ಥೆಗಳಿಂದ ತನಿಖೆ ಮಾಡಿಸಲು ಸರ್ಕಾರಕ್ಕೆ ಇರುವ ಅಡಚಣೆಗಳೇನು? | ಮೇಲ್ಕಂಡಂತೆ ಹಣ ದುರುಪಯೋಗ ಸಾಬೀತಾಗದ ಕಾರಣ ಪ್ರಶ್ನೆ ಉದ್ಭವಿಸುವುದಿಲ್ಲ. |

**ಸಿಐ 71 ಸಿಎಲ್ಎಮ್ 2023(ಇ)**

K.N.Rajanna

**(ಕೆ. ಎನ್. ರಾಜಣ್ಣ)**
**ಸಹಕಾರ ಸಚಿವರು**